# ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಚನ್ನರಾಯಪಟ್ಟಣ

ಕರ್ನಾಟಕ ಸರ್ಕಾರ
ಹೇಳಿಕೆ ಹಾಳೆ (ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4(ಸಿವಿಲ್)

**ಸಿ.ಸಿ. ನಂ. 130/2024**

ಸಿಡಬ್ಲ್ಯೂ- 3 ಪಿಡಬ್ಲ್ಯೂ-2

| | |
|---|---|
| ಹೆಸರು ಃ | **ರವಿ** |
| ತಂದೆ/ಗಂಡನ ಹೆಸರು ಃ | **ದೇವೆಗೌಡ** |
| ವಯಸ್ಸು ಃ | **36 ವರ್ಷ** |
| ಉದ್ಯೋಗ ಃ | **ಕೂಲಿ** |
| ವಾಸಸ್ಥಳ ಃ | **ಐಕನಹಳ್ಳಿ** |

**ದಿ 19.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಖ್ಯ ವಿಚಾರಣೆ / ಪಿರ್ಯಾದಿ ಪರಃ ಮಾನ್ಯ ಎಪಿಪಿಃ ರವರಿಂದಃ**

ಚಾಸಾ 1 ಮತ್ತು 2 ಪರಿಚಿತರು. ಆರೋಪಿಯ ಪರಿಚಯ ಇಲ್ಲ. ನನಗೆ ಮೃತ ಲೋಕೆಶರವರ ಪರಿಚಯ. ಸುಮಾರು 2 ವರ್ಷದ ಹಿಂದೆ ಸಹಿಯನ್ನು ಮಾಡಿರುತ್ತೇನೆ. ನನ್ನ ಜೊತೆ ಬೇರೆ ಯಾರು ಸಹಿಯನ್ನು ಮಾಡಿರುವುದಿಲ್ಲ ಸಹಿಯನ್ನು ಮಾಡುವಾಗ ಸಮಯ ಎಷ್ಟಾಗಿತ್ತು ಎಂದು ಗೊತ್ತಿಲ್ಲ. ಈಗ ನನಗೆ ತೋರಿಸುತ್ತಿರುವ ಛಾಯಚಿತ್ರದಲ್ಲಿರುವ ವಾಹನ ಗುರುತಿಸಲು ಸಾಧ್ಯವಿಲ್ಲ, ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಸಾಕ್ಷಿಯು ಗುರುತಿಸಿರುವುದಿಲ್ಲ. ನಾನು ಸಹಿ ಮಾಡುವಾಗ ಪೋಲಿಸರು ಯಾವುದೇ ವಾಹನವನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಸಹಿ ಇರುವ ದಾಖಲಾತಿ ಕೃತ್ಯ ನಡೆದ ಸ್ಥಳದ ಹಾಗೂ ಅಮಾನತ್ತು ಮಹಜರ್ ಆಗಿರುತ್ತದೆ. ಅದನ್ನು ನಿಪಿ 1 ಎಂದು ಸಾಕ್ಷಿಯ ಸಹಿಯನ್ನು ನಿಪಿ 1 ಬಿ ಎಂದು ಗುರುತಿಸಲಾಯಿತು. ನಿಪಿ 1 ರಲ್ಲಿರುವ ವಿಚಾರ ನನಗೆ ಗೊತ್ತಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ದಾಖಲೆಗಳನ್ನು ಪರಿಗಣಿಸಿ ಪ್ರತಿಕೂಲ

ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಸಿದೆ)

**ಪಾಟೀಸವಾಲುಃ ಮಾನ್ಯ ಎ ಪಿ ಪಿ ರವರಿಂದಃ**

ನಿಪಿ 1 ರಂತೆ ಪೋಲಿಸರು ದಿಃ 05.02.2024 ರಲ್ಲಿ ಚಾಸಾ 1 ರವರು ತೋರಿಸಿದ ಜಾಗದಲ್ಲಿ ನನ್ನ ಮತ್ತು ಚಾಸಾ 2 ರವರ ಸಮಕ್ಷಮ ಮಧ್ಯಾಹ್ನ 2.40 ರಿಂದ 3.40 ರವರೆಗೆ ನಿಪಿ 1 ರಂತೆ ಮಹಜರ್ ಕ್ರಮ ಜರುಗಿಸಿ ಅಪಘಾತ ಮಾಡಿದ ವಾಹನವನ್ನು ವಶ ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ/ಆರೋಪಿಗಳ ಪರ ವಕಿಲರಿಂದಃ**

ಇರುವುದಿಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ ಕೇಳಿ ಸರಿಯಾಗಿದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ., ಚನ್ನರಾಯಪಟ್ಟಣ